


ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ನಿಜವಾದ ಗೆಳೆಯ, ಬಂಧು ಯಾರು?

ಹಿಂದಿನ ಶನಿವಾರ ಸಂಜೆ ಒಂದು ಖಗೋಳ ಕೌತುಕ ಘಟಿಸಿತು. ಅದೇ ಖಗ್ರಾಸ ಚಂದ್ರಗ್ರಹಣ. ಅಂದು ಹುಣ್ಣಿಮೆ. ಆದರೆ ಸೂರ್ಯಾಸ್ತವಾಗುತ್ತಿದ್ದಂತೆ ಪೂರ್ವ ದಿಗಂತದಲ್ಲಿ ಪೂರ್ಣಚಂದ್ರ ಕಂಗೊಳಿಸಲಿಲ್ಲ; ಬದಲಾಗಿ ಮಂಕುಮಂಕಾಗಿ ಕಾಣಿಸಿಕೊಂಡ. ಕ್ರಮೇಣ ತಾಮ್ರವರ್ಣ, ಕಿತ್ತಳೆ ವರ್ಣ ಹೀಗೆ ತನ್ನ ಬಣ್ಣವನ್ನು ಬದಲಿಸುತ್ತಾ ಕಳಾಹೀನನಾಗಿ ಲಜ್ಜೆಗೊಂಡು ಮೋಡಗಳ ಜವನಿಕೆಯಲ್ಲಿ ಅಡಗಿ ಕುಳಿತಂತೆ ಭ್ರಮೆಯನ್ನುಂಟುಮಾಡಿದ. ಇಂಥದೇ ಘಟನೆಯನ್ನು ಇನ್ನೊಮ್ಮೆ ಕಾಣಲು ಇನ್ನೂ ಏಳು ವರ್ಷ ಕಾಯಬೇಕೆಂದು ಖಗೋಳಶಾಸ್ತ್ರಜ್ಞರ ಲೆಕ್ಕಾಚಾರ.



ಚಂದ್ರಗ್ರಹಣವಾಗಲೀ ಸೂರ್ಯಗ್ರಹಣವಾಗಲೀ ಅದು ಖಗೋಲದಲ್ಲಿ ನಡೆಯುವ ಬೆಳಕು-ನೆರಳಿನಾಟ! ಸೂರ್ಯ ಮತ್ತಿತರ ತಾರೆಗಳೆಲ್ಲವೂ ಭೂಮಿಯ ಸುತ್ತ ಪರಿಭ್ರಮಣ ಮಾಡುತ್ತವೆ ಎಂದು ಭಾವಿಸಿದ ಕಾಲವಿತ್ತು. ಸೂರ್ಯ, ನಕ್ಷತ್ರಗಳು ಇದ್ದಲ್ಲಿಯೇ ಇರುತ್ತವೆ; ಭೂಮಿಯೂ ಸೇರಿದಂತೆ ಎಲ್ಲ ಗ್ರಹಗಳು ಮತ್ತು ಉಪಗ್ರಹಗಳು ಸೂರ್ಯನನ್ನು ನಿರಂತರವಾಗಿ ಸುತ್ತುತ್ತವೆ ಎಂಬುದೀಗ ವೈಜ್ಞಾನಿಕ ಸತ್ಯ. ಸೂರ್ಯ ಮತ್ತು ಚಂದ್ರನ ಮಧ್ಯೆ ಒಂದೇ ಸರಳರೇಖೆಯಲ್ಲಿ ಭೂಮಿ ಬಂದ ಹುಣ್ಣಿಮೆಯಂದು ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದರಿಂದ ಚಂದ್ರಗ್ರಹಣವಾಗುತ್ತದೆ. ಸೂರ್ಯ ಮತ್ತು ಭೂಮಿಯ ಮಧ್ಯೆ ಒಂದೇ ಸರಳರೇಖೆಯಲ್ಲಿ ಚಂದ್ರ ಬಂದ ಅಮಾವಾಸ್ಯೆಯಂದು ಚಂದ್ರನ ನೆರಳು ಭೂಮಿಯ ಮೇಲೆ ಬೀಳುವುದರಿಂದ ಸೂರ್ಯಗ್ರಹಣವಾಗುತ್ತದೆ. ಅಪರೂಪಕ್ಕೊಮ್ಮೆ ಸೂರ್ಯ ಸಂಪೂರ್ಣ ಮರೆಯಾದಾಗ ಖಗ್ರಾಸ ಸೂರ್ಯಗ್ರಹಣ ಸಂಭವಿಸಿ ಹಗಲಿನಲ್ಲಿಯೇ ಸಂಜೆಯಾಗುತ್ತದೆ, ಹಕ್ಕಿಗಳು ಗೂಡಿಗೆ ಧಾವಿಸುತ್ತವೆ; ಕ್ಷಣಹೊತ್ತು ಕತ್ತಲಾವರಿಸಿ ಆಕಾಶದಲ್ಲಿ ನಕ್ಷತ್ರಗಳೂ ಕಾಣಿಸಿಕೊಳ್ಳುತ್ತವೆ!

ಸೂರ್ಯಗ್ರಹಣ ಎಂದರೆ ವಾಸ್ತವವಾಗಿ ಸೂರ್ಯನಿಗೆ ಏನೋ ಆಗುತ್ತದೆಯೆಂದಲ್ಲ; ಚಂದ್ರಗ್ರಹಣವೆಂದರೆ ಚಂದ್ರನಿಗೆ ಏನೋ ಆಗುತ್ತದೆಯೆಂದಲ್ಲ. ಅದು ವಾಸ್ತವವಾಗಿ ನಮ್ಮ ದೃಷ್ಟಿಗೆ ಹಿಡಿದ ಗ್ರಹಣ. ಭೂಮಿಯ ಮೇಲೆ ನಿಂತು ನೋಡುವ ನಮಗೆ ಗ್ರಹಣವೆಂದು ಭಾವಿಸುವ ಅವಧಿಯಲ್ಲಿ ಸೂರ್ಯ/ಚಂದ್ರ ಕಾಣಿಸುವುದಿಲ್ಲ, ಅಷ್ಟೆ! ಕಣ್ಣಿದ್ದ ಮಾತ್ರಕ್ಕೆ ನೋಡಲು ಸಾಧ್ಯವಿಲ್ಲ, ನೋಡಲು ಕಣ್ಣು ಎಷ್ಟು ಮುಖ್ಯವೋ ಬೆಳಕೂ ಅಷ್ಟೇ ಮುಖ್ಯ. ಗ್ರಹಣದ ಸಂದರ್ಭದಲ್ಲಿ ಬೆಳಕು ಬೀಳದ ಕಾರಣ ಸೂರ್ಯ/ಚಂದ್ರರನ್ನು ನೋಡಲು ನಮಗೆ ಸಾಧ್ಯವಾಗುವುದಿಲ್ಲ.

ಅಮೇರಿಕೆಯ ಮೂಲನಿವಾಸಿಗಳಾದ ರೆಡ್‌ಇಂಡಿಯನ್ನರು ಚಂದ್ರಗ್ರಹಣಕ್ಕೆ ಕೊಡುವ ಕಾರಣವೇ ಬೇರೆ. ಅವರ ಪ್ರಕಾರ ಚಂದ್ರನಿಗೆ 20 ಜನ ಪತ್ನಿಯರು ಇದ್ದರು. ಅವನ ಮನೆಯಲ್ಲಿ ಕಾಡುಸಿಂಹ, ಕರಡಿ, ಹಾವು ಮೊದಲಾದ ಅನೇಕ ಸಾಕುಪ್ರಾಣಿಗಳು ಇದ್ದವು. ಒಮ್ಮೆ ಚಂದ್ರ ಹೊರಗೆ ಹೋಗಿ ಬೇಟೆಯಾಡಿ ತಂದ ಆಹಾರ ಅವುಗಳಿಗೆ ರುಚಿಸಲಿಲ್ಲ. ಸಿಟ್ಟಿನಿಂದ ಅವು ಚಂದ್ರನ ಮೇಲೆ ಬಿದ್ದು ಮೈಪರಚಿ ಗಾಯಗೊಳಿಸಿದವು. ಚಂದ್ರನ ಮೈಯಿಂದ ರಕ್ತ ಒಸರತೊಡಗಿತು. ಕೂಡಲೇ ಚಂದ್ರನ ಪತ್ನಿಯರೆಲ್ಲರೂ ಸೇರಿ ಸಾಕುಪ್ರಾಣಿಗಳನ್ನು ಹೊಡೆದು ಗಂಡನನ್ನು ರಕ್ಷಣೆಮಾಡಿದರು.

ಮತ್ತೊಂದು ದಂತಕಥೆಯ ಪ್ರಕಾರ ಆಕಾಶದಲ್ಲಿ ಕರಡಿಯೊಂದು ಕ್ಷೀರಪಥದ (Milky Way) ಮಾರ್ಗವಾಗಿ ಹೋಗುತ್ತಿರುವಾಗ ಸೂರ್ಯ ಎದುರಾಗುತ್ತಾನೆ. ದಾರಿ ಬಿಟ್ಟುಕೊಡುವ ವಿಚಾರದಲ್ಲಿ ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆಯುತ್ತದೆ. ಯಾರೊಬ್ಬರೂ ಪಕ್ಕಕ್ಕೆ ಸರಿದುಹೋಗಲು ತಯಾರಾಗದ ಕಾರಣ ಘರ್ಷಣೆಯುಂಟಾಗುತ್ತದೆ. ಕರಡಿ ಸೂರ್ಯನನ್ನು ತಿವಿದು ಗಾಯಗೊಳಿಸಿ ಮುಂದೆ ಹೋಗುತ್ತದೆ. ನಂತರ ಸೂರ್ಯನ ಸಹೋದರಿಯಾದ ಚಂದ್ರ ಎದುರಾದಾಗಲೂ ಅದೇ ರೀತಿ ದಾರಿಬಿಡುವ ವಿಚಾರದಲ್ಲಿ ಇಬ್ಬರ ಮಧ್ಯೆ ಜಗಳ ನಡೆದು ಘರ್ಷಣೆಯುಂಟಾಗುತ್ತದೆ.

ಇನ್ನು ಭಾರತೀಯರೆಲ್ಲರಿಗೂ ಗೊತ್ತಿರುವ ಪುರಾಣಕಥೆಗಳ ಪ್ರಕಾರ ಸಮುದ್ರಮಥನದ ಸಂದರ್ಭದಲ್ಲಿ ಹೊರಬಂದ ಅಮೃತವನ್ನು ವಿಷ್ಣುವು ದೇವತೆಗಳನ್ನು ಸಾಲಾಗಿ ಕೂರಿಸಿ ವಿತರಣೆ ಮಾಡಿದ. ರಾಕ್ಷಸನೊಬ್ಬನು ಕಣ್ಣು ತಪ್ಪಿಸಿಕೊಂಡು ಬಂದು ದೇವತೆಗಳ ಸಾಲಿನಲ್ಲಿ ಕುಳಿತು ವಿಷ್ಣುವಿನ ಕೈಯಿಂದ ಅಮೃತವನ್ನು ಪಡೆದ. ಮೇಲೆ ನೋಡುತ್ತಿದ್ದ ಸೂರ್ಯ-ಚಂದ್ರರು ಅವನು ರಾಕ್ಷಸನೆಂದು ವಿಷ್ಣುವಿನ ಗಮನ ಸೆಳೆದರು. ಎಂತಹ ಪ್ರಮಾದವಾಯಿತಲ್ಲಾ ಎಂದು ವಿಷ್ಣುವು ತನ್ನ ಕೈಯೊಳಗಿನ ಚಕ್ರದಿಂದ ಆ ರಾಕ್ಷಸನ ತಲೆಯನ್ನು ಕತ್ತರಿಸಿದ. ಆದರೆ ಆಗಲೇ ಆ ರಾಕ್ಷಸನು ಅಮೃತವನ್ನು ಸೇವಿಸಿದ್ದರಿಂದ ಸಾಯಲಿಲ್ಲ. ಕತ್ತರಿಸಿದ ತಲೆ ರಾಹುವಾಯಿತು. ಮುಂಡ ಕೇತುವಾಯಿತು. ತಾನು ರಾಕ್ಷಸನೆಂಬ ಗುರುತನ್ನು ವಿಷ್ಣುವಿಗೆ ಬಯಲು ಮಾಡಿದ ಕಾರಣ ಸೂರ್ಯ-ಚಂದ್ರರ ಮೇಲೆ ರಾಹು-ಕೇತುಗಳು ಸೇಡನ್ನು ತೀರಿಸಿಕೊಳ್ಳಲು ಆರಂಭಿಸಿದರು. ಅದೇ ಚಂದ್ರಗ್ರಹಣ ಮತ್ತು ಸೂರ್ಯಗ್ರಹಣ.

ಇಂತಹ ಪುರಾಣ ಕಥೆಗಳನ್ನು ಕಟ್ಟುಕತೆಗಳು ಅಥವಾ ಅರ್ಥವಿಲ್ಲದ ಕಗ್ಗ ಎಂದು ವಿಚಾರವಂತರು ಹೀಗಳೆಯುತ್ತಾರೆ. ಆದರೆ ಈ ಕಥೆಗಳಲ್ಲಿ ವೈಜ್ಞಾನಿಕ ಸತ್ಯವಿಲ್ಲದಿದ್ದರೂ ಇವುಗಳಲ್ಲಿ ಮನೋವೈಜ್ಞಾನಿಕ ತಥ್ಯ ಅಡಗಿರುವುದನ್ನು ಮನಗಾಣಬಹುದಾಗಿದೆ. ಮನುಷ್ಯನಲ್ಲಿ ನೆಲೆ ನಿಂತಿರುವ ದ್ವೇಷ, ಹಗೆತನ, ಸೇಡಿನ ಮನೋಧರ್ಮದ ಅಭಿವ್ಯಕ್ತಿ ಇವುಗಳಲ್ಲಿದೆ. ಈ ಪುರಾಣ ಕಥೆಗಳನ್ನು ಮನುಷ್ಯನ ಮನೋವ್ಯಾಪಾರದ ರೂಪಕಗಳೆಂದು ಗ್ರಹಿಸಬಹುದು. ಇಂತಹ ಪೌರಾಣಿಕ ಕಥೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡೇ ಬಸವಣ್ಣನವರು ಮನುಷ್ಯ-ಮನುಷ್ಯರ ಮಧ್ಯೆ ಇರುವ ತೋರಿಕೆಯ ಸಂಬಂಧಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಈ ಮುಂದಿನ ವಚನದಲ್ಲಿ ಮಾಡಿದ್ದಾರೆ:

***ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯಾ***
***ಚಂದ್ರ ಕುಂದೆ ಕುಂದುವುದಯ್ಯಾ***
***ಚಂದ್ರಂಗೆ ರಾಹು ಅಡ್ಡಬಂದಲ್ಲಿ ಅಂಬುಧಿ ಬೊಬ್ಬಿಟ್ಟಿತ್ತೇ?***
***ಅಂಬುಧಿಯ ಮುನಿಯಾಪೋಷಣವ ಕೊಂಬಲ್ಲಿ***
***ಚಂದ್ರಮನಡ್ಡಬಂದನೇ?***
***ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ***
***ಜಗದ ನಂಟ ನೀನೇ ಅಯ್ಯಾ ಕೂಡಲಸಂಗಮದೇವಾ!***

ಹುಣ್ಣಿಮೆಯಂದು ಚಂದ್ರನು ಉದಯಿಸುವುದೇ ತಡ ಸಮುದ್ರದ ಅಲೆಗಳು ಗಗನದೆತ್ತರಕ್ಕೆ ಪುಟಿದೆದ್ದು ಚಂದ್ರನನ್ನು ಮುದ್ದಿಸಲು ಹೊರಟಿವೆಯೋ ಎಂದೆನಿಸುತ್ತದೆ. ಅದೇ ಅಮಾವಾಸ್ಯೆಯಂದು ಸಮುದ್ರದಲ್ಲಿ ಅಲೆಗಳ ಸದ್ದಡಗಿ ಒಂದು ರೀತಿಯ ಸ್ಮಶಾನ ಮೌನ ಆವರಿಸಿಬಿಡುತ್ತದೆ. ಚಂದ್ರ ಉದಯಿಸಿದಾಗ ಉಬ್ಬಿ, ಚಂದ್ರನು ಕಳಾಹೀನನಾದಾಗ ಕುಗ್ಗುವ ಸಮುದ್ರವನ್ನು ನೋಡಿದರೆ ಚಂದ್ರ ಮತ್ತು ಸಮುದ್ರದ ಮಧ್ಯೆ ಏನೋ ಗಾಢವಾದ ಸಂಬಂಧವಿದೆಯೆಂದು ಅನ್ನಿಸುತ್ತದೆ. ಸಮುದ್ರದ ಅಲೆಗಳ ಉಬ್ಬರ ಇಳಿತಗಳು ಪ್ರಾಕೃತಿಕ ಘಟನೆ (natural phenomenon) ಯಾದರೂ ಅದನ್ನು ಮನೋವೈಜ್ಞಾನಿಕ ದೃಷ್ಟಿಯಿಂದ ಇಲ್ಲಿ ನೋಡಲಾಗಿದೆ.

ಇಲ್ಲಿ ಚಂದ್ರ ಮತ್ತು ಸಮುದ್ರವನ್ನು ಇಬ್ಬರು ಆತ್ಮೀಯ ಸ್ನೇಹಿತರೆಂದು ಭಾವಿಸಿದರೆ ವಚನದ ಆಶಯ ಸ್ಪಷ್ಟವಾಗುತ್ತದೆ. ಅವರಿಬ್ಬರ ಮಧ್ಯೆ ಅಂತಹ ಗಾಢವಾದ ಸ್ನೇಹವು ಇದ್ದ ಪಕ್ಷದಲ್ಲಿ ಚಂದ್ರಗ್ರಹಣದಂದು ರಾಹು ಚಂದ್ರನನ್ನು ಹಿಡಿದು ಹಿಂಸಿಸುತ್ತಿರುವಾಗ ಸಮುದ್ರವು ಏಕೆ ಬೊಬ್ಬೆ ಹೊಡೆಯಲಿಲ್ಲ? ಚಂದ್ರನ ರಕ್ಷಣೆಗೆ ಏಕೆ ಧಾವಿಸಲಿಲ್ಲ? ಅಹಂಕಾರದಿಂದ ತುಂಬಿದ ಸಮುದ್ರವನ್ನು ಅಗಸ್ತ್ಯ ಮಹರ್ಷಿಯು ಒಂದೇ ಗುಟುಕಿಗೆ ಕುಡಿದನೆಂದು ಪುರಾಣಕಾರರು ಹೇಳುತ್ತಾರೆ. ಆಗ ಆತ್ಮೀಯ ಸ್ನೇಹಿತನೆನಿಸಿಕೊಂಡ ಚಂದ್ರನು ಕಷ್ಟದಲ್ಲಿ ಸಿಲುಕಿಕೊಂಡ ಸಮುದ್ರದ ರಕ್ಷಣೆಗೆ ಏಕೆ ಇಳಿದುಬರಲಿಲ್ಲ. ಚಂದ್ರ ಮತ್ತು ಸಮುದ್ರದ ಗಾಢ ಸ್ನೇಹ ಎಲ್ಲಿಗೆ ಹೋಯಿತು? ಕಷ್ಟದಲ್ಲಿ ನೆರವಾಗದ ಸ್ನೇಹಿತ ಅದೆಂತಹ ಸ್ನೇಹಿತ? ಚಂದ್ರ ಕಷ್ಟದಲ್ಲಿರುವಾಗ ಸಮುದ್ರವಾಗಲೀ, ಸಮುದ್ರ ಕಷ್ಟದಲ್ಲಿರುವಾಗ ಚಂದ್ರನಾಗಲೀ ಸಹಾಯಕ್ಕೆ ಬರಲಿಲ್ಲ.

ಸಹೃದಯ ಓದುಗರೇ! ಗ್ರಹಣ ಮನುಷ್ಯರಿಗೂ ಸಹ ಹಿಡಿಯುತ್ತದೆ. ಜೀವನ ಪಯಣ ಸದಾಕಾಲ ಸುಖವಾಗಿಯೇ ಇರುವುದಿಲ್ಲ, ಕಷ್ಟ-ನಷ್ಟಗಳೂ, ದುಃಖ-ದುಮ್ಮಾನಗಳೂ ಈ ಮಹಾನ್ ಪಯಣದ ಸಂಗಾತಿಗಳೇ. ಬೆಳದಿಂಗಳನ್ನು ಬಯಸುವ ಮನಸ್ಸು ಬಿಸಿಲಿಗೆ ಅಂಜಿದರಾಗದು. ರಾಹುಗ್ರಸ್ತ ಚಂದ್ರ ತನ್ನ ಚಲನೆಯನ್ನು ನಿಲ್ಲಿಸಿ ತಟಸ್ಥನಾದರೆ ಗ್ರಹಣ ಮೋಕ್ಷವಾಗುವುದೆಂತು? ಹಾಗೆಯೇ ಕಷ್ಟ ಬಂತೆಂದು ಕಿಂಕರ್ತವ್ಯಮೂಢನಾಗಿ ಜಡಭರತನಂತೆ ಸುಮ್ಮನಿರದೆ ತನ್ನ ಪಾಲಿನ ಕೆಲಸವನ್ನು ಮಾಡುತ್ತಾ ಸಾಗಿದರೆ ಬಂದ ಕಷ್ಟಗಳು ಕ್ರಮೇಣ ದೂರ ಸರಿದು ಸುಖದ ಬೆಳಿಚುಕ್ಕಿ ಮೂಡುತ್ತದೆ. ಇಲ್ಲಿ ಚಂದ್ರ ಮತ್ತು ಸಮುದ್ರ ಜಡವಸ್ತುಗಳಾದರೂ ಅವುಗಳ ಮೂಲಕ ಮಾನವರಲ್ಲಿ ಕಂಡುಬರುವ ಮಾನವ ಸಹಜ ದೌರ್ಬಲ್ಯವನ್ನು ಎತ್ತಿ ತೋರಿಸಲಾಗಿದೆ. ಇದರಿಂದ ತಿಳಿಯುವುದಿಷ್ಟೆ: ಯಾರಿಗೆ ಯಾರೂ ಇಲ್ಲ, ಅಧಿಕಾರ, ಅಂತಸ್ತು, ಹಣ ಇದ್ದಾಗಲೇ ಎಲ್ಲರೂ ಹತ್ತಿರ ಬರುವುದು ಮತ್ತು ಸುತ್ತುವರಿಯುವುದು, ಕಷ್ಟದಲ್ಲಿದ್ದಾಗ ಹತ್ತಿರ ಇದ್ದವರೂ ದೂರಾಗುತ್ತಾರೆ. ಕಷ್ಟದಲ್ಲಿ ಸಿಕ್ಕಿಕೊಂಡಾಗಲೇ ನಿಜವಾದ ಸ್ನೇಹಿತರು ಮತ್ತು ಬಂಧುಗಳು ಯಾರು ಎಂದು ನಿಮಗೆ ತಿಳಿಯುವುದು. ಸ್ನೇಹಿತರಾಗಲೀ, ಬಂಧುಗಳಾಗಲೀ ಆಪತ್ತಿನಲ್ಲಿ ಎಷ್ಟು ದಿನ ನೆರವಾದಾರು? ಅವರವೇ ಆದ ಸಂಸಾರದ ತಾಪತ್ರಯಗಳಿರುತ್ತವೆ. ಇವರದೇನು ಕಾಟ ಎಂದು ಗೊಣಗಲಾರಂಭಿಸುತ್ತಾರೆ. ಇದ್ದೂ ಇಲ್ಲದಂತೆ ನಟಿಸುತ್ತಾರೆ. ನಿಮ್ಮ ಕಷ್ಟದಲ್ಲಿ ನಿಮಗಿರುವ ನಿಜವಾದ ಗೆಳೆಯ ಮತ್ತು ಬಂಧುವೆಂದರೆ ದೇವರು:

**"ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ**
**ಜಗದ ನಂಟ ನೀನೇ ಅಯ್ಯಾ ಕೂಡಲಸಂಗಮ ದೇವಾ!"**

**15.12.2011**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑